**ದಿನಾಂಕಃ 25.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ.ಎ.ಸಿ.ವೈ. ವಕೀಲರಿಂದಃ**

ನಿಪಿ–6 ರಿಂದ 8 ರ ಬಿಲ್ಲುಗಳಿಗೂ ನಿಡಿ–4 ರಿಂದ 6 ಬಿಲ್ಲುಗಳ,ಗೂ ಸಂಪೂರ್ಣ ವ್ಯತ್ಯಾಸ ಇದೆ ಅಂದರೆ ಸರಿ. ಸಾಕ್ಷಿಯು ಮುಂದುವರೆದು ಜಿ.ಎಸ್.ಟಿ. ನಂಬರ್ ಹಾಕಿ ಡೌನ್ ಲೋಡ್ ಮಾಡಿದಾಗ ಆ ರೀತಿ ಬರುತ್ತವೆ ಎಂದು ಉತ್ತರಿಸುತ್ತಾರೆ. ಈ ರೀತಿ ದಾವೆಯಲ್ಲಿ ಹೇಳಿರುವುದಿಲ್ಲ ಅಂದರೆ ಸರಿ. ಒಂದು ಬಾರಿ ಬಿಲ್ಲು ಹಾಕಿದರೆ ಯಾವ ಕಾರಣಕ್ಕೂ ಬದಲಾವಣೆ ಮಾಡಲು ಬರುವುದಿಲ್ಲ ಅಂದರೆ ಸರಿ. ನಿಪಿ–6 ರಲ್ಲಿ ಜೆ.ಕೆ. ಸಿಮೆಂಟ್ ಎಂದು ಯಾರು ನಮೂದಿಸಿರುತ್ತಾರೆ ಅಂದರೆ ಸಾಕ್ಷಿಯು ಜಿ.ಎಸ್.ಟಿ ಪೋರ್ಟಲ್ ನಲ್ಲಿ ಡೌನ್ ಲೋಡ್ ಮಾಡುವಾಗ ಆ ರೀತಿ ಬರುತ್ತದೆ ಎಂದು ಉತ್ತರಿಸುತ್ತಾರೆ. ನಿಪಿ–6 ರಿಂದ 8 ನ್ನು ಸೃಷ್ಟಿಸಿ ದಾವೆಯೊಂದಿಗೆ ಹಾಜರುಪಡಿಸಿರುತ್ತೀರಿ ಅಂದರೆ ಸುಳ್ಳು. ನಾವು ಗ್ರಾಹಕರಿಗೆ ಬಿಲ್ಲು ಕೊಟ್ಟಾಗ ಹಿಂಬರಹವನ್ನು ಪಡೆದುಕೊಳ್ಳುತ್ತೇವೆ ಅಂದರೆ ಸಾಕ್ಷಿಯು ಆ ತರಹ ಯಾವುದೇ ಹಿಂಬರಹ ಪಡೆದುಕೊಳ್ಳುವುದಿಲ್ಲ ಎಂದು ಉತ್ತರಿಸುತ್ತಾರೆ. ಪ್ರತಿವಾದಿಯವರ ವಿರುದ್ದ ದ್ವೇಷ ತೀರಿಸಿಕೊಳ್ಳಲು ಈ ರೀತಿ ಸುಳ್ಳು ದಾವೆಯನ್ನು ದಾಖಲಿಸಿರುತ್ತೀರಿ ಅಂದರೆ ಸರಿಯಲ್ಲ. ನನ್ನ ತಂದೆ ಮತ್ತು ಪ್ರತಿವಾದಿಯವರು ವಿಶ್ವಾಸಿಕರಾಗಿದ್ದರು ಅಂದರೆ ಸುಳ್ಳು. ಪ್ರತಿವಾದಿಯು ಯಾವುದೇ ಕಾಲಕ್ಕೂ ನನ್ನ ಅಂಗಡಿಗೆ ಬಂದು ಸಿಮೆಂಟ್ ಖರೀದಿಸಿರುತ್ತಾರೆ ಅಂದರೆ ಸುಳ್ಳು.

ಪ್ರತಿವಾದಿಯವರ ಮನೆಗೆ ಹೋಗಿ ಹಣವನ್ನು ಕೇಳಿರುತ್ತೇವೆ. ಆ ರೀತಿ ನನ್ನ ದಾವೆಯಲ್ಲಿ ನಮೂದಿಸಿರುವುದಿಲ್ಲ. ಈ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ. ಪ್ರತಿವಾದಿಯವರು ಯಾವುದೇ ಕಾಲಕ್ಕೂ ನನ್ನೊಂದಿಗೆ ವ್ಯವಹಾರ ಮಾಡಿರುವುದಿಲ್ಲ. ಈ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಯವರ ಕಿರಾಣಿ ಅಂಗಡಿ ಇದ್ದು, ಅದನ್ನು ಅವರ ಮಗ ನಡೆಸುತ್ತಾನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಯವರ ವಿರುದ್ಧ ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**
**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**